# ನಿನ್ನೆಲ್ಲ ಕೆಲಸ ಬಿಟ್ಟು ಬಾ ವಧುವೆ

ನಿನ್ನೆಲ್ಲ ಕೆಲಸ ಬಿಟ್ಟು ಬಾ ವಧುವೆ. ಕೇಳು ಅತಿಥಿ ಬಂದಿರುವ
ಕೇಳಿತೇ ಅವನು ಮೆಲ್ಲಗೆ ಬಾರಿಸುವ ಬಾಗಿಲದ ಸದ್ದು
ಮೆಲ್ಲಾಗಿಸು ನಿನ್ನ ಕಾಲ್ಗೆಜ್ಜೆಗಳ ನೂಪುರ
ನಿಧಾನಿಸು ನಿನ್ನ ಹೆಜ್ಜೆಗಳ ಅವಸರ
ಬಿಟ್ಟು ಬಾ ನಿನ್ನೆಲ್ಲ ಕೆಲಸ. ಅತಿಥಿ ಬಂದಿರುವ ಈ ಸಂಜೆ

ಅಲ್ಲ. ಅದು ಗಾಳಿಯಲ್ಲ. ವಧುವೇ ಅಂಜದಿರು
ಅದು ವಸಂತ ಋತುವಿನ ಹುಣ್ಣಿಮೆ ರಾತ್ರಿ
ಕರಗಿವೆ ನೆರಳು ಅಂಗಳದಲ್ಲಿ
ಬಾನು ಬೆಳಗಿದೆ ಬೆಳದಿಂಗಳಲ್ಲಿ
ಬೇಕಾದರೆ ಮುಖದ ಮೇಲೆ ಸೆರಗೆಳೆದು ಬಾ
ಹೆದರದಿರೆ ಕೋಣೆಯೊಳಗಿನ ದೀಪ ಹಿಡಿದು ಬಾ
ಅಲ್ಲ. ಅದು ಗಾಳಿಯಲ್ಲ. ವಧುವೇ ಹೆದರದಿರು

ನೀ ನಾಚಿದರೆ ಅವನೊಡನೆ ಮಾತಾಡದಿರು
ಅವನ ಸ್ವಾಗತಿಸಲು ಬಾಗಿಲ ಬಳಿ ಇರು
ಬೇಕೆನಿಸಿದರೆ ಕಣ್ಣು ತಗ್ಗಿಸು ಅವನು ಪ್ರಶ್ನೆ ಕೇಳಿದರೆ
ಕೈಬಳೆ ಖಣಕದಿರಲಿ. ದೀಪ ಹಿಡಿದು ಅವನ ಒಳಗೆ ಕರೆ
ನೀ ನಾಚಿದರೆ ಅವನೊಡನೆ ಮಾತಾಡದಿರು

ನೀನಿನ್ನೂ ಕೆಲಸ ಮುಗಿಸಿಲ್ಲವೆ ವಧುವೆ. ಅತಿಥಿ ಬಂದಿರುವ
ನೀನಿನ್ನೂ ಗೋಹಟ್ಟಿಯಲಿ ದೀಪ ಹಚ್ಚಿಲ್ಲವೆ
ನೀನಿನ್ನೂ ಹೂತಟ್ಟೆ ಮಾಡಿಲ್ಲವೆ ಸಂಜೆ ಸೇವೆಗೆ
ನೀನಿನ್ನೂ ಹಣೆಗೆ ಕುಂಕುಮವಿಟ್ಟು ಸಿಂಗರಿಸಿಕೊಂಡಿಲ್ಲವೆ
ಓ, ವಧುವೆ, ಕೇಳಿತೆ. ಅತಿಥಿ ಬಂದಿರುವ
ನೀನಿನ್ನೂ ನಿನ್ನ ಕೆಲಸ ಮುಗಿಸಿಲ್ಲವೆ

